**<u>ಸಾಕ್ಷಿಯನ್ನು ದಿಃ 09.09.2024 ರಂದು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.</u>**

**ಮುಂದುವರಿದ <u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎನ್ ಎ ವಕೀಲರಿಂದ.</u>**

ನಾನು ಈ ಹಿಂದೆ ಕೇಳಿದ ಮನೆಯನ್ನು ನಿರ್ಮಾಣ ಮಾಡುವ ವೇಳೆಗೆ ನನ್ನ ಅಕ್ಕ - ತಂಗಿಯರ ಮದುವೆ ಆಗಿತ್ತು. ಆಗ 2ನೇ ಪ್ರತಿವಾದಿಯವನ್ನು ಹೊರತುಪಡಿಸಿ ಬೇರೆ ಯಾವುದೇ ಆದಾಯ ಇರಲಿಲ್ಲಎಂದರೆ ಸರಿಯಲ್ಲ.ನಾವು ಆಗ ಕೂಲಿ ಮಾಡುತ್ತಿದ್ದೆವು, ಮೇಕೆ ಇದ್ದವು, ಎಮ್ಮೆ ಇದ್ದವು, ವಿಳ್ಳೇದ ಎಲೆ ತೋಟ ಇತ್ತು. ನಾನು ಮತ್ತು ನನ್ನ ತಾಯಿ ಮೇಲಿನ ಹೊಲ ಮತ್ತು ಪ್ರಾಣಿಗಳನ್ನು ನಾವುನೋಡಿ ಕೊಳ್ಳುತ್ತಿದ್ದೆವು. ಆಗ ನನಗೆ 18 ರಿಂದ 20 ವರ್ಷ ವಯಸ್ಸಾಗಿತ್ತು. ಮೇಲಿನ ವಿಚಾರಗಳ ಬಗ್ಗೆ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸದರಿ ಮನೆಯನ್ನು 2ನೇ ಪ್ರತಿವಾದಿಯೇ ತನ್ನ ಆದಾಯದಿಂದ ನಿರ್ಮಾಣ ಮಾಡಿದರು ಎಂದರೆ ಸರಿಯಲ್ಲ. ನನ್ನ ಸಹೋದರ ಯು ಸಿ ಕೆಂಪಯ್ಯ ಎಷ್ಟನೇ ವಯಸ್ಸಿನಲ್ಲಿ ಪೊಲೀಸ್ ಕೆಲಸಕ್ಕೆ ಸೇರಿಕೊಂಡರು ಎಂದು ನೆನಪಿಲ್ಲ. ಸದರಿ ವಿಚಾರನ್ನು ನನ್ನ ವಾದ ಪತ್ರದಲ್ಲಿ ಬರೆಸಿಲ್ಲ. ದಾವಾದ 2ನೇ ಆಸ್ತಿಯನ್ನು 2ನೇ ಪ್ರತಿವಾದಿಯೇ ನನ್ನ ತಾಯಿಯ ಹೆಸರಿನಲ್ಲಿ ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಸದರಿ ಆಸ್ತಿಯನ್ನು ಖರೀದಿ ಮಾಡುವ ವೇಳೆ ನಮ್ಮ ಕುಟುಂಬಕ್ಕೆ ಬೇರೆ ಆದಾಯ ಇರಲಿಲ್ಲ ಎಂದರೆ ಸರಿಯಲ್ಲ. ಹಾಗಾಗಿಯೇ ನಮ್ಮ ತಾಯಿ 2ನೇ ಪ್ರತಿವಾದಿಯ ಮಗನಿಗೆ ದಾನ ಪತ್ರದ ಮೂಲಕ ಸದರಿ ಆಸ್ತಿಯನ್ನು ಬಟ್ಟುಕೊಟ್ಟರುತ್ತಾರೆ ಎಂದರೆ ಸಾಕ್ಷಿ ಮುಂದುವರಿದು ನಮ್ಮ ತಾಯಿಗೆ ಮೊಸ ಮಾಡಿ ಆ ದಾನ ಪತ್ರವನ್ನು ಸೃಷ್ಟಿ ಮಾಡಿ ಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ತಾಯಿಯು ಸ್ವ-ಇಚ್ಚೆಯಿಂದ ದಾನ ಪತ್ರ ಬರೆದು ಕೊಟ್ಟಿರುವ ವಿಚಾರ ಗೊತ್ತಿದ್ದರೂ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಮದುವೆಯನ್ನು 2ನೇ ಪ್ರತಿವಾದಿಯೇ ಖರ್ಚು ಮಾಡಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಮದುವೆಯಾಗುವ ಕಾಲಕ್ಕೆ ಕೊಣನಕುಂಟೆ ಯಲ್ಲಿ ಇರುವ ಬೇಕರಿಯಲ್ಲಿ ಕೆಲಸ ಮಾಡುತ್ತಿದ್ದೆ. ಆಗ ನನಗೆ 8 ರಿಂದ 10 ಸಂಬಳ ಇತ್ತು. ನಾನು ಈ ಬಗ್ಗೆ ಯಾವುದೇ ದಾಖಲೆಯನ್ನು ಸಲ್ಲಿಸಿರುವವುದಿಲ್ಲ. ಈ ಮೇಲಿನ ವಿಚಾರವು ಸುಳ್ಳು ಹೇಳುತ್ತಿದ್ಮೇನೆಂದರೆ ಸರಿಯಲ್ಲ. 1ನೇ ಪ್ರತಿವಾದಿ ತನ್ನ ವಾದ ಪತ್ರದಲ್ಲಿ ದಾವಾದ 2ನೇ ಆಸ್ತಿಯು ತನ್ನ ಸ್ವಂತ ಆಸ್ತಿಯೆಂದು ಬರೆಸಿದ್ದಾರೆ ಎಂದರೆ ಅದನ್ನು ನಾನು ಓದಿಸಿ ತಿಳಿದುಕೊಂಡಿರ್‌ತೇನೆಂದು ನುಡಿಯುತ್ತಾರೆ. ಪಿರ್ತಾರ್ಜಿತವಾಗಿ 1 ಎಕರೆ 20 ಗುಂಟೆ ಜಮೀನು ಇದೆ. ನಮ್ಮ ತಂದೆಯ

ಕಾಲದಿಂದಲೂ ಅಷ್ಟೇ ಆಸ್ತಿ ಇತ್ತು ಎಂದರೆ ಸರಿ. ಸದರಿ ಆಸ್ತಿಯು ಮಳೆ ಆಶ್ರೀತ ಭೂಮಿ ಎಂದರೆ ಸಾಕ್ಷಿಯು ಒಂದು ಬಾವಿ ಇತ್ತು ಅದರ ನೀರಿನಿಂದ ತೋಟಮಾಡಿರುತ್ತೇವೆ ಎಂದು ನುಡಿಯುತ್ತಾರೆ. ಸದರಿ ಬಾವಿಯು 7 ಗುಂಟೆ ವಿಸ್ತಿರ್ಣದಲ್ಲಿ ಇತ್ತು. ಸದರಿ ಬಾವಿಯಲ್ಲಿ 18 ರಿಂದ 20 ವರ್ಷಗಳ ವರೆಗೆ ನೀರು ಇತ್ತು. ಸಾಕ್ಷಿಗೆ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆಸರಿಯಲ್ಲ. ಸದರಿ ವಿಚಾರವನ್ನು ನನ್ನ ವಾದ ಪತ್ರದಲ್ಲಿ ಬರೆಸಿಲ್ಲ. ನಾನು ಈ ಮೇಲೆ ಹೇಳಿದ ಮನೆಯನ್ನು ನಿರ್ಮಿಸಲು ಎಷ್ಟು ಖರ್ಚು ಆಗಿರಬಹುದು ಎಂದು ನನಗೆ ಗೊತ್ತಿಲ. 2 ನೇ ಪ್ರತಿವಾದಿಯು ಸದರಿ ಮನೆಯನ್ನು 10 ಲಕ್ಷ ರೂ ವೆಚ್ಚ ಮಾಡಿ ನಿರ್ಮಿ ಸಿರುತ್ತಾರೆ ಎಂದರೆ ಸಾಕ್ಷಿಯು ನನ್ನ ಸಹೋದರ ಯು ಸಿ ಕೆಂಪಯ್ಯ ನಿರ್ಮಿ ಸಿರುತ್ತಾರೆ ಎಂದು ನುಡಿಯುತ್ತಾರೆ. ಈ ವಿಚಾರವಾಗಿ ಯಾವುದೇ ದಾಖಲೆ ನ್ಯಾಯಾಲಯಕ್ಕೆ ಹಾಜರು ಮಾಡಿರುವುದಿಲ್ಲ. ನಾನು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಮ್ಮ ಅಕ್ಕ - ತಂಗಿಯರ ಮದುವೆಯನ್ನು 2 ನೇ ಪ್ರತಿವಾದಿ ವಾಡಿರುತ್ತಾರೆ ಎಂದರ ಸರಿಯಲ್ಲ. ದಾವಾ 2 ನೇ ಆಸ್ತಿಯನ್ನು ಯಾವ ಇಸವಿಯಲ್ಲಿ ಖರೀದಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ, ದಾವಾದ 2 ನೇ ಆಸ್ತಿಯಲ್ಲಿ ನಮಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

**ರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)
ಓ.ಹೇ.ಕೇ. ಸರಿ ಇದೆ

ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ
ಕುಣಿಗಲ್.